ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ

ದಿನಾಂಕ : DATE 2/6/2020

# ಜೂ.19ಕ್ಕೆ 24 ಸ್ಥಾನಗಳ ರಾಜ್ಯಸಭೆ ಚುನಾವಣೆ

ಉ.ವಾ. 2/6/20

ನವದೆಹಲಿ: ಕರ್ನಾಟಕದ ನಾಲ್ಕು ರಾಜ್ಯಸಭಾ ಸೇರಿ 24 ಸ್ಥಾನಗಳಿಗೆ ಜೂ.19ರಂದು ಚುನಾವಣೆ ನಡೆಯಲಿದೆ.

ರಾಜ್ಯದ ಬಿ.ಕೆ.ಹರಿಪ್ರಸಾದ್, ಎಂ.ವಿ. ರಾಜೀವ್ ಗೌಡ (ಕಾಂಗ್ರೆಸ್), ಪ್ರಭಾಕರ್ ಕೋರೆ (ಬಿಜೆಪಿ) ಹಾಗೂ ಕುಪೇಂದ್ರ ರೆಡ್ಡಿ (ಜೆಡಿಎಸ್) ಅವರ ರಾಜ್ಯಸಭಾ ಅವಧಿ ಜೂ.25ಕ್ಕೆ ಕೊನೆಗೊಳ್ಳಲಿದೆ. ಜೂ.19ಕ್ಕೆ ಚುನಾವಣೆ ನಡೆದು, ಅಂದು ಸಂಜೆಯೇ ಫಲಿತಾಂಶ ಹೊರಬೀಳಲಿದೆ. ಬೇರೆ ರಾಜ್ಯಗಳ 20 ಸ್ಥಾನಗಳಿಗೂ ಅಂದೇ ಚುನಾವಣೆ ನಡೆಯಲಿದೆ. ರಾಜ್ಯದ 4 ಸ್ಥಾನಗಳಲ್ಲಿ 2 ಆಡಳಿತಾರೂಢ ಬಿಜೆಪಿ(117)ಗೆ ಗ್ಯಾರಂಟಿ ಎಂದೇ ಹೇಳಲಾಗುತ್ತಿದೆ. ಕಾಂಗ್ರೆಸ್(68) ಕೂಡ ಒಂದನ್ನು ಆರಾಮಾಗಿ ಗೆಲ್ಲಲಿದೆ. ಆದರೆ, 4ನೇ ಸ್ಥಾನ ಕುತೂಹಲಕ್ಕೆ ಕಾರಣವಾಗಿದೆ. ಜೆಡಿಎಸ್ 34 ಸದಸ್ಯ ಬಲ ಹೊಂದಿದ್ದು ಈ ಸ್ಥಾನ ಗೆಲ್ಲಬೇಕಾದರೆ ಕಾಂಗ್ರೆಸ್ ನೆರವು ಬೇಕು. ಆದರೆ, ಬಿಜೆಪಿ 3ನೇ ಅಭ್ಯರ್ಥಿ ಕಣಕ್ಕಿಳಿಸಿ, ಜೆಡಿಎಸ್ ಆಸೆಗೆ ತಣ್ಣೀರೆರಚಲಿದೆ ಎಂದು ಹೇಳಲಾಗುತ್ತಿದೆ.